ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1484
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 19-03-2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಗೃಹ ರಕ್ಷಕ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿ ಒಟ್ಟು 26,449 ಗೃಹರಕ್ಷಕ ಸ್ವಯಂ ಸೇವಕರು ದಾಖಲಾಗಿದ್ದಾರೆ. (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ)
(ಆ)	ಇವರುಗಳಿಗೆ ನೀಡಲಾಗುವ ವೇತನ, ಇತರೆ ಸೌಲಭ್ಯಗಳ ವಿವರಗಳನ್ನು ನೀಡುವುದು; ಇವರುಗಳ ವೇತನವನ್ನು ಹೆಚ್ಚಿಸಲು ಸರ್ಕಾರದ ಕ್ರಮಗಳೇನು;	ಗೃಹರಕ್ಷಕ ಸದಸ್ಯರುಗಳಿಗೆ ಕರ್ತವ್ಯದಲ್ಲಿದ್ದಾಗ ಕರ್ತವ್ಯ ಭತ್ಯೆ ಹಾಗೂ ಇತರ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. 1. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಪೊಲೀಸ್ ಇಲಾಖೆಯಲ್ಲಿ ನಿಯೋಜಿತರಾದ ಪೊಲೀಸ್ ಪೇದೆಗಳಿಗೆ ಮೀಸಲಾದ ಕರ್ತವ್ಯ ನಿರ್ವಹಿಸುತ್ತಿರುವ ಗೃಹರಕ್ಷಕರಿಗೆ ಮಾತ್ರ ದಿನಾಂಕ:01-04-2020 ರಿಂದ ಜಾರಿಗೆ ಬರುವಂತೆ ಕರ್ತವ್ಯ/ದಿನ ಭತ್ಯೆಯನ್ನು ರೂ.750/- ಕ್ಕೆ ಹೆಚ್ಚಿಸಲು ಸರ್ಕಾರವು ಮಂಜೂರಾತಿ ನೀಡಿದೆ. 2. ಬೆಂಗಳೂರು ನಗರದಲ್ಲಿ ದಿನವೊಂದಕ್ಕೆ ಪ್ರತಿಯೊಬ್ಬರಿಗೆ ರೂ.455/- ರಂತೆ ರಾಜ್ಯದ ಇತರೆ ಸ್ಥಳಗಳಲ್ಲಿ ರೂ. 380/- ರಂತೆ ಕರ್ತವ್ಯ ತರಬೇತಿ ಭತ್ಯೆ ನೀಡಲಾಗುತ್ತಿದೆ. 3. ಕವಾಯತು ಭತ್ಯೆ- ರೂ. 23/- ಕವಾಯತು ಒಂದಕ್ಕೆ. 4. ಪ್ರಯಾಣ ಭತ್ಯೆ- ಸರ್ಕಾರಿ ನೌಕರರಿಗೆ ಅನ್ವಯವಾಗುವ ದರದಲ್ಲಿ (ಕರ್ತವ್ಯ/ತರಬೇತಿಗೆ ನಿಯೋಜಿಸಿದಾಗ) 5. ಗೃಹರಕ್ಷಕರ ಕರ್ತವ್ಯ/ತರಬೇತಿಯ ಸಂದರ್ಭಗಳಲ್ಲಿ ಗಾಯಗೊಂಡಾಗ ಶೇಕಡಾ 60% ಕ್ಕಿಂತ ಹೆಚ್ಚಿದ್ದಲ್ಲಿ ರೂ.3,00,000/- ರವರೆಗೆ ಹಾಗೂ 60% ಕ್ಕಿಂತ ಕಡಿಮೆ ಗಾಯಗೊಂಡಲ್ಲಿ ರೂ.2,00,000/- ರವರೆಗೆ ಎಕ್ಸ್‌ಗ್ರೇಷಿಯಾವನ್ನು ಹಾಗೂ ನಿಧನರಾದಲ್ಲಿ ಪರಿಹಾರ ಧನ ರೂ. 1,00,000/- ರಿಂದ ರೂ.5,00,000/- ಕ್ಕೆ ಹೆಚ್ಚಿಸಲಾಗಿದೆ. 6. ಗೃಹರಕ್ಷಕರ ಕಲ್ಯಾಣ ನಿಧಿಯಿಂದ ವೈದ್ಯಕೀಯ ವೆಚ್ಚ/ಮಕ್ಕಳ ಉನ್ನತ ವಿದ್ಯಾಭ್ಯಾಸ ಇತ್ಯಾದಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ. 7. ಮರಣ ಹೊಂದಿದ ಗೃಹರಕ್ಷಕರ ಕುಟುಂಬಕ್ಕೆ ರೂ.10,000/- ನೆರವನ್ನು ಹಾಗೂ ಕರ್ತವ್ಯದ ಸಂದರ್ಭದಲ್ಲಿ ದುರ್ಮರಣ ಹೊಂದಿದ ಗೃಹರಕ್ಷಕರ ಕುಟುಂಬಕ್ಕೆ ರೂ.15,000/- ಗಳನ್ನು ಗೃಹರಕ್ಷಕ ನಿಧಿಯಿಂದ ನೀಡಲಾಗುತ್ತಿದೆ. 8. ಉತ್ತಮ ಸೇವೆ ಸಲ್ಲಿಸಿದ ಸದಸ್ಯರಿಗೆ ನಗದು ಬಹುಮಾನ/ರಾಷ್ಟ್ರಪತಿ ಪದಕ/ಮಾನ್ಯ ಮುಖ್ಯಮಂತ್ರಿಗಳ ಪದಕ ನೀಡಲಾಗುತ್ತಿದೆ. 9. ದೋಭಿ ಭತ್ಯೆ ಮಾಸಿಕ ರೂ.80/- ಗಳನ್ನು ನೀಡಲಾಗುತ್ತಿದೆ.

...2

(ಇ)	ಇವರುಗಳಿಗೂ ಸಹ ಪೊಲೀಸ್‌ರಿಗೆ ನೀಡುವಂತಹ ಕಿಟ್‌ಗಳನ್ನು ಸವಲತ್ತುಗಳನ್ನು ನೀಡಲು ಸರ್ಕಾರದ ನಿಲುವೇನು;	ಸರ್ಕಾರವು ಗೃಹರಕ್ಷಕ ಇಲಾಖೆಗೆ ನಿಗದಿಪಡಿಸಲಾಗಿರುವಂತೆ ಕಿಟ್‌ಗಳನ್ನು ನೀಡಲಾಗುತ್ತಿದೆ.
(ಈ)	ಈ ಗೃಹ ರಕ್ಷಕ ಸಿಬ್ಬಂದಿಗಳ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಕ್ರ.ಸಂ. 'ಆ' ರಲ್ಲಿ ವಿವರಿಸಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ಒಇ 21 ಕಗೃಸೇ 2020

(ಬಸವರಾಜ ಬೊಮ್ಮಾಯಿ)

ಗೃಹ ಸಚಿವರು.

ವಿಧಾನ ಪರಿಷತ್ತಿನ ಸದಸ್ಯರಾದ, ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **1484** ಕ್ಕೆ ಅನುಬಂಧ

ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೃಹರಕ್ಷಕರ ಜಿಲ್ಲಾವಾರು ವಿವರಣಾ ಪಟ್ಟಿ :-

ಕ್ರ.ಸಂ.	ಜಿಲ್ಲೆಯ ಹೆಸರು	ಘಟಕಗಳ ಸಂಖ್ಯೆ	ಹಂಚಿಕೆಯಾದ ಸಂಖ್ಯಾಬಲ	ಗೃಹರಕ್ಷಕರ ಸಂಖ್ಯೆ		ವಾಸ್ತವಿಕ ಸಂಖ್ಯಾ ಬಲ	ಖಾಲಿ
				ಪುರುಷ	ಮಹಿಳೆ		
1.	ಬೆಂಗಳೂರು ಉತ್ತರ	17	1850	904	861	1765	85
2.	ಬೆಂಗಳೂರು ಗ್ರಾಮಾಂತರ	14	1650	1007	472	1479	171
3.	ಬೆಂಗಳೂರು ದಕ್ಷಿಣ	15	1850	945	620	1565	285
4.	ಬಾಗಲಕೋಟೆ	22	1000	888	101	989	11
5.	ಬೆಳಗಾವಿ	30	1350	1007	117	1124	226
6.	ಬಳ್ಳಾರಿ	14	1500	1323	75	1398	102
7.	ಬೀದರ್	15	1000	828	125	953	47
8.	ಚಿಕ್ಕಮಗಳೂರು	20	800	561	86	647	153
9.	ಚಾಮರಾಜನಗರ	09	700	612	70	682	18
10.	ಚಿತ್ರದುರ್ಗ	14	700	618	72	690	10
11.	ಚಿಕ್ಕಬಳ್ಳಾಪುರ	07	700	571	0	571	129
12.	ಧಾರವಾಡ	08	800	510	137	647	153
13.	ದಾವಣಗೆರೆ	13	651	634	0	634	17
14.	ದಕ್ಷಿಣ ಕನ್ನಡ	14	1000	672	269	941	59
15.	ಗದಗ	11	700	506	0	506	194
16	ಕಲಬುರಗಿ	09	1000	710	69	779	221
17	ಹಾಸನ	30	1200	1020	65	1085	115
18.	ಹಾವೇರಿ	08	700	550	0	550	150
19.	ಕೊಡಗು	09	500	193	59	252	248
20.	ಕೋಲಾರ	10	1200	1005	150	1155	45
21.	ಕೊಪ್ಪಳ	13	700	578	0	578	122
22.	ಮಂಡ್ಯ	12	949	666	64	730	219
23.	ಮೈಸೂರು	10	1300	1079	181	1260	40
24.	ರಾಯಚೂರು	11	800	571	24	595	205
25.	ರಾಮನಗರ	09	700	358	171	529	171
26.	ಶಿವಮೊಗ್ಗ	15	1000	867	109	976	24
27.	ತುಮಕೂರು	18	900	652	102	754	146
28.	ಉಡುಪಿ	08	500	370	66	436	64
29.	ಉತ್ತರ ಕನ್ನಡ	15	900	732	102	834	66
30.	ವಿಜಯಪುರ	12	800	747	0	747	53
31.	ಯಾದಗಿರಿ	07	600	598	0	598	02
ಒಟ್ಟು		**419**	**30000**	**22282**	**4167**	**26449**	**3551**

------------00------------